ಸಾಕ್ಷಿಯ ಹೆಸರುಃ ಶ್ರೀಮತಿ ಸಿ.ಎಂ. ಹೇಮಲತಾ

**ದಿನಾಂಕಃ 19-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎಸ್.ಆರ್. ಪರವಾಗಿ ಶ್ರೀ ಡಿ.ಕೆ.ಎಂ. ವಕೀಲರಿಂದಃ</u>

ನಾನು ಕಳೆದ ಮೂರು ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಯಾವ ದಿನಾಂಕದಿಂದ ಮೈಸೂರಿನಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಜನವರಿ 2020 ರಿಂದ ವಾಸವಾಗಿದ್ದೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು 2 ವರ್ಷ ಮುಕ್ತಾಯವಾಗಿಲ್ಲ ಎನ್ನುತ್ತಾರೆ. ನಾನು ಜನವರಿ 2020 ರಿಂದಲೇ ಮೈಸೂರಿನಲ್ಲೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಗೃಹಿಣಿ ಎಂದರೆ ಸಾಕ್ಷಿ ನಾನು 20 ವರ್ಷಗಳಿಂದ ಮನೆ ಪಾಠ ಮಾಡುತ್ತಿದ್ದೇನೆ ಎನ್ನುತ್ತಾರೆ. ಮನೆ ಪಾಠ ಮಾಡಲು ನಾನು ಪರವಾನಗಿ ಪಡೆದಿಲ್ಲ ಕಾರಣ ಅದರ ಅಗತ್ಯತೆ ಇಲ್ಲ. ನಾನು ಗೃಹಿಣಿಯಾಗಿದ್ದರಿಂದ ಹಾಗೂ ಮನೆ ಪಾಠ ಮಾಡಲಿಲ್ಲದ ಕಾರಣ ನನಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ.

2) ನನ್ನ ಗಂಡ ಚಾಲಕನಾಗಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಮೈಸೂರಿನಲ್ಲಿ ಅವರು ಕಳೆದ 18 ವರ್ಷಗಳಿಂದ ಸ್ಕೂಟರ್ ಮೆಕ್ಯಾನಿಕ್ ಆಗಿದ್ದಾರೆ. ನನ್ನ ಮಕ್ಕಳು ವಿದ್ಯಾರ್ಥಿಗಳು ಎಂದರೆ ಸರಿ. ನಾವು ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಆರೋಪಿಯ ತಂದೆಯ ಹೆಸರು ಕೃಷ್ಣ ಅವರು ಕಳೆದ 15 ವರ್ಷಗಳಿಂದ ಪರಿಚಯ. ಆರೋಪಿ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಮಕ್ಕಳ ಪರಿಚಯ ಇಲ್ಲ. ಆದರೆ ಆರೋಪಿ ನನ್ನ ತಮ್ಮನ ಸ್ನೇಹಿತ. ಆರೋಪಿ ಸಕಲೇಶಪುರ ನ್ಯಾಯಾಲಯದಲ್ಲಿ ಸಮನ್ಸ್ ಜಾರಿ ಮಾಡುತ್ತಾರೆ. ಆರೋಪಿಯ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯ ಹಣಕಾಸಿನ ಪರಿಸ್ಥಿತಿ ಬಗ್ಗೆ ನನಗೆ ಗೊತ್ತಿಲ್ಲ.

3) ನಾನು ಆದಾಯ ತೆರಿಗೆ ಸಂದಾಯ ಮಾಡುವುದಿಲ್ಲ. ನಾನು ಹಸಿರು ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ನಾವು ಕಳೆದ 20 ವರ್ಷಗಳಿಂದಲೂ ಹಸಿರು ಪಡಿತರ ಚೀಟಿಯನ್ನು ಹೊಂದಿರುತ್ತೇವೆ. ನನಗೆ ಮದುವೆಯಾಗಿ 26 ವರ್ಷಗಳಾಗಿದ್ದು, ಅಲ್ಲಿಂದಲೂ ನಾನು ನನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದೇನೆ. ನನ್ನ ಗಂಡ ಆದಾಯ ತೆರಿಗೆ ಸಂದಾಯ ಮಾಡುವುದಿಲ್ಲ. ಮೈಸೂರಿನಲ್ಲಿ ನನ್ನ ಮತ್ತು ನಮ್ಮ ಯಜಮಾನರ ಹೆಸರಿನಲ್ಲಿ ಆಸ್ತಿ ಇಲ್ಲ ಎಂದರೆ ಸರಿ. ಕೆ.ಆರ್.ನಗರದಲ್ಲಿ ನಮಗೆ ಒಂದು ಮನೆ ಇದ್ದು, ಅದಕ್ಕೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಎರಡು ದಾವೆಗಳು ಇದ್ದವು ಎಂದರೆ ಸರಿ. ಅದರಲ್ಲಿ ಒಂದು ದಾವೆ ನಾಗರತ್ನಮ್ಮ ಎಂಬುವವರು ಕ್ರಯದ ಕರಾರು ಪತ್ರದ ಪ್ರಕಾರ ಕ್ರಯ ಪತ್ರ ಬರೆದುಕೊಡಲು ಕೋರಿದ್ದು, ಸದರಿ ದಾವೆ ನಾಗರತ್ನಮ್ಮರವರ ಪರವಾಗಿ ಆದೇಶವಾಗಿದೆ ಎಂದರೆ ಸರಿ. ನಾನು ಮತ್ತು ನನ್ನ ಮಕ್ಕಳು ವಿಶ್ವಾಸದಿಂದ ಇದ್ದೇವೆ ಹಾಗೂ ಒಟ್ಟಿಗೆ ಇದ್ದೇವೆ ಎಂದರೆ ಸರಿ. ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಮನೆಯನ್ನು ಮಾರಾಟ ಮಾಡಿದ್ದೆವು ಎಂದರೆ ಸಾಕ್ಷಿ ನಿವೇಶನ ಕೊಳ್ಳಲು ಅಥವಾ ಮನೆ ಕೊಳ್ಳಲು ಮಾರಾಟ ಮಾಡಿದ್ದೆವು ಎನ್ನುತ್ತಾರೆ.

4) ನಾವು ಆರೋಪಿಯ ಮನೆಗೆ ಹೋಗಿಲ್ಲ, ಆದರೆ ಅವರೇ ನಮ್ಮ ಮನೆಗೆ ಬರುತ್ತಿದ್ದರು. ಜೂನ್ 2020 ರಲ್ಲಿ ಆರೋಪಿ ನಮ್ಮ ಮನೆಗೆ ಬಂದು ಹಣವನ್ನು ಕೇಳಿದ್ದರು. ಅವರು ಗುರುವಾರ ಬಂದಿದ್ದರು, ಆದರೆ ದಿನಾಂಕ ಹೇಳಲು ಬರುವುದಿಲ್ಲ. ಆರೋಪಿ ನಮ್ಮ ಮನೆಗೆ ಬೆಳಗ್ಗೆ 11.00 ಗಂಟೆಗೆ ಬಂದು ಹಣವನ್ನು ಕೇಳಿದ್ದರು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು, ನಮ್ಮ ಯಜಮಾನರು ಹಾಗೂ ನನ್ನ ಮಗ ಇದ್ದೆವು. ಆರೋಪಿ ಮನೆ ಕಟ್ಟುತ್ತಿದ್ದೇನೆ ನನಗೆ ರೂ.8,75,000/- ಬೇಕೆಂದು ಕೇಳಿದ್ದರು. ಅವರು ವಿಜಯಾ ಬ್ಯಾಂಕ್ ರಸ್ತೆ, ಗಾಂಧಿ ವೃತ್ತ, ಚನ್ನರಾಯಪಟ್ಟಣದಲ್ಲಿ ಮನೆ ಕಟ್ಟುತ್ತಿರುವುದಾಗಿ ಹೇಳಿದ್ದರು. ಆಗ ನಾವು ಆರೋಪಿಗೆ ದಿನಾಂಕಃ 07.11.2020 ರಂದು ಹಣ ಕೊಡುವುದಾಗಿ ಕಳುಹಿಸಿದ್ದೆವು. ಅದೇ ದಿನ ಆರೋಪಿ ಕೆ.ಆರ್.ನಗರದ ನಮ್ಮ ಮನೆಗೆ ಬಂದಿರುತ್ತಾರೆ. ಆಗ ಆರೋಪಿ ಒಬ್ಬರೇ ಬಂದಿದ್ದರು. ಆ ದಿನ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಯಜಮಾನರು ಇದ್ದೆವು. ಆರೋಪಿ ಬರುವ ಮುನ್ನವೇ ನಾವು ರೂ.8,75,000/-ಗಳನ್ನು ತಯಾರಿಟ್ಟುಕೊಂಡಿದ್ದೆವು.

ಕರ್ನಾಟಕ ಬ್ಯಾಂಕಿನಲ್ಲಿ ನಾನು ಉಳಿತಾಯ ಮಾಡಿದ ರೂ.2,00,000/- ಹಣ ಹಾಗೂ ಕ್ರಯದ ಕರಾರು ಪತ್ರ ಮಾಡಿ ರೂ7,50,000/- ಪಡೆದುಕೊಂಡಿದ್ದು, ಆ ಹಣವನ್ನು ನಾವು ಆರೋಪಿಗೆ ನೀಡಿರುತ್ತೇವೆ. ರೂ.7,50,000/-ಗಳನ್ನು ನಾವು ಮನೆಯಲ್ಲಿ ಇಟ್ಟುಕೊಂಡಿದ್ದೆವು. ದಿನಾಂಕಃ19.03.2015 ರಂದು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಅದರ ಮುಂಗಡ ಹಣವನ್ನು ನಾವು ಇಟ್ಟುಕೊಂಡಿದ್ದೆವು. ಈ ರೂ.7,50,000/-ಗಳಲ್ಲಿ ರೂ.50,000/-ಗಳನ್ನು ಖರ್ಚು ಮಾಡಿ, ರೂ.7,00,000/-ಗಳನ್ನು ಇಟ್ಟುಕೊಂಡಿದ್ದೆವು.

5) ಆರೋಪಿ ನಮಗೆ ಈ ಹಣವನ್ನು ಒಂದು ವರ್ಷದೊಳಗೆ ವಾಪಸ್ಸು ಕೊಡುವುದಾಗಿ ಹೇಳಿದ್ದರು. ಈ ಕುರಿತು ಬಡ್ಡಿಗಾಗಿ ಮಾತುಕತೆಯಾಗಿರಲಿಲ್ಲ. ಆರೋಪಿ ನಮಗೆ ಸಂಬಂಧಿಕರು ಅಲ್ಲ, ಕೇವಲ ಪರಿಚಯ ಮಾತ್ರ. ಈ ಹಣ ನನ್ನದು ಮತ್ತು ನನ್ನ ಮನೆಯವರದ್ದು ಎಂದು ಹೇಳಿ ಕೊಟ್ಟಿದ್ದೆವು. ನಾಗರತ್ನಮ್ಮ ರವರು ಸಲ್ಲಿಸಿದ ದಾವೆಯಲ್ಲಿ ನಾವು ಸ್ವತ್ತನ್ನು ಮಾರಾಟ ಮಾಡಲು ದಾಖಲೆ ಬರೆದುಕೊಟ್ಟಿಲ್ಲ ಹಾಗೂ ಕೇವಲ ರೂ.7,50,000/-ಗಳನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ಕುಟುಂಬದ ಸಾಲ ತೀರುವಳಿಗಾಗಿ ಸಾಲ ಪಡೆದಿರುವುದಾಗಿ ಪ್ರತಿವಾದ ತೆಗೆದುಕೊಂಡಿದ್ದೆವು ಎಂದರೆ ಸಾಕ್ಷಿ ಅದು ಸರಿಯಲ್ಲ ನಾವು ನಿವೇಶನವನ್ನು ಕೊಳ್ಳಲು ಅಥವಾ ಮನೆಯನ್ನು ಕೊಳ್ಳಲು ಪತ್ರ ಮಾಡಿಕೊಂಡಿದ್ದೆವು ಎನ್ನುತ್ತಾರೆ ಅಸಲು ದಾವೆ ಸಂಖ್ಯೆಃ19/2018 ರಲ್ಲಿ ನಾವು ದಿನಾಂಕಃ 01.12.2017 ರಂದು ಸದರಿ ನಾಗರತ್ನಮ್ಮರವರಿಗೆ ರೂ.5,00,000/-ಗಳನ್ನು ವಾಪಸ್ಸು ಕೊಟ್ಟಿರುವುದಾಗಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಾಗರತ್ನಮ್ಮರವರಿಗೆ ಕ್ರಯದ ಕರಾರು ಪತ್ರ ಮಾಡಿಕೊಡುವ ಮುನ್ನ ಬೇರೆಯವರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದೆವು ಎಂದರೆ ಸರಿ. ಮೊದಲು ನಾವು ನಾಗೇಶ್ ಎಂಬುವವರಿಗೆ ಕ್ರಯದ ಕರಾರು ಪತ್ರವನ್ನು ರೂ.4,75,000/-ಗಳನ್ನು ಮಾಡಿಕೊಟ್ಟಿದ್ದು, ಅದನ್ನು 2014 ರಲ್ಲಿ ಕ್ಲಿಯರ್ ಮಾಡಿರುತ್ತೇವೆ. ನಾಗರತ್ನಮ್ಮರವರಿಂದ ಪಡೆದುಕೊಂಡ ಹಣವನ್ನೇ ನಾಗೇಶ್ ರವರಿಗೆ ಕೊಟ್ಟು ವ್ಯವಹಾರವನ್ನು ಕ್ಲಿಯರ್ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ಕುಟುಂಬದ ದರುದ್ದು ಉದ್ದೇಶದಿಂದ ನಾಗರತ್ನಮ್ಮರವರಿಗೆ

ನಾವು ನಮ್ಮ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆವು ಎಂದರೆ ಸರಿಯಲ್ಲ.

6) ನಿಪಿ-01ರ ಚೆಕ್ಕಿನ ಮೇಲೆ ಹೇಮಲತಾ, ದಿನಾಂಕ ಮತ್ತು ಮೊತ್ತದ ಬರವಣಿಗೆ (ಅಕ್ಷರ ಮತ್ತು ಸಂಖ್ಯೆಗಳನ್ನು) ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-01ರ ಮೇಲಿರುವ ಸಹಿ ಮತ್ತು ಇತರೆ ಬರವಣಿಗೆಗಳು ಬೇರೆ ಬೇರೆಯಾಗಿವೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-01ರಲ್ಲಿರುವ ಸಹಿ ಆರೋಪಿಯದ್ದು ಅಲ್ಲ ಎಂದರೆ ಸಾಕ್ಷಿ ಅವರೇ ನಮ್ಮ ಮುಂದೆ ಸಹಿ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ಈಗ ದೂರಿನಲ್ಲಿ ಹೇಮಲತಾ ಎಂದು ಮಾಡಿರುವ ಸಹಿ, ಹಾಗೂ ನಿಪಿ-01ರಲ್ಲಿರುವ ಬರವಣಿಗೆ ಒಂದೇ ರೀತಿಯಾಗಿದೆ ಹಾಗೂ ಒಬ್ಬರೇ ಬರೆದ ಹಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾವು ಆರೋಪಿಗೆ ರೂ.8,75,000/-ಗಳನ್ನು ನಗದು ರೂಪದಲ್ಲಿ ಅಥವಾ ಚೆಕ್ ರೂಪದಲ್ಲಿ ಕೊಟ್ಟಿರುತ್ತೇವೆ ಎಂದು ದೂರಿನಲ್ಲಿ ನಿಖರವಾಗಿ ಹೇಳಿಲ್ಲ ಎಂದರೆ ಸಾಕ್ಷಿ ಹಣ ಕೊಟ್ಟಿರುತ್ತೇವೆ ಎನ್ನುತ್ತಾರೆ. ನಾನು 18-20 ವರ್ಷಗಳಿಂದಲೂ ಉಳಿತಾಯ ಮಾಡುತ್ತಾ ಬಂದಿರುವ ಹಣ ರೂ.2,00,000/-ಗಳು ಆಗಿರುತ್ತದೆ.

7) ನಾನೇ ಹಾಜರುಪಡಿಸಿದ ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್‌ನಲ್ಲಿ ದಿನಾಂಕಃ 03.04.2020 ರಂದು ನನ್ನ ಬ್ಯಾಂಕ್ ಬ್ಯಾಲಾನ್ಸ್ ರೂ.20/- ಇದೆ ಎಂದರೆ ಸರಿ. ದಿನಾಂಕಃ 07.11.2020 ರಂದು ನನ್ನ ಮಗಳ ಖಾತೆಯಿಂದ ನನ್ನ ಖಾತೆಗೆ ರೂ.2,00,000/-ಗಳನ್ನು ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿಗೆ ನನ್ನಿಂದ ಹಣ ಕೇಳುವ ದರದ್ದು ಮತ್ತು ಸಂದರ್ಭ ಬಂದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.